# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 466 |
| 2 | ಸದಸ್ಯರ ಹೆಸರು | : ಶ್ರೀ ಕೆ. ಅಬ್ದುಲ್ ಜಬ್ಬಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : 15–09–2022 |
| 4 | ಉತ್ತರಿಸುವವರು | : ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.88 ಜೀವನ್‌ಭೀಮಾನಗರದ ಹೆಚ್‌ಎಎಲ್ 2ನೇ ಹಂತ, ಇಂದಿರಾನಗರದ ಸುತ್ತಮುತ್ತಲ್ಲಿನ ಪ್ರದೇಶದಲ್ಲಿ ಮಳೆ ನೀರು ವಾಸದ ಮನೆಗಳಿಗೆ ಪ್ರವಾಹ ರೀತಿಯಲ್ಲಿ ಹರಿದು ಸ್ಥಳೀಯ ನಾಗರಿಕರು ಸಂಕಷ್ಟಕ್ಕೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು; | ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ ದಿನಾಂಕ: 04–09–2022 ರಂದು ರಾತ್ರಿ ಮತ್ತು ದಿನಾಂಕ:05–09–2022 ರ ಮುಂಜಾನೆ ಗರಿಷ್ಠ 148.50 ಮೀ.ಮೀ. ಗಳಷ್ಟು ಮಳೆಯಾಗಿರುತ್ತದೆ. ಇದರಿಂದಾಗಿ ವಾರ್ಡ್ ನಂ. 88 ಜೀವನ್ ಭೀಮಾನಗರ ವ್ಯಾಪ್ತಿಯ 17ನೇ ಮುಖ್ಯರಸ್ತೆ 17ನೇ ಎ, 17ನೇ ಬಿ, 18ನೇ ಮುಖ್ಯರಸ್ತೆ, 18ನೇ ಎ, 18ನೇ ಬಿ, 18ನೇ ಸಿ, 18ನೇ ಡಿ ಮುಖ್ಯರಸ್ತೆ ಮತ್ತು 19ನೇ ಮುಖ್ಯರಸ್ತೆ ಹಾಗೂ ಇದಕ್ಕೆ ಹೊಂದಿಕೊಂಡಿರುವ ಅಡ್ಡರಸ್ತೆಗಳಲ್ಲಿ ಬೃಹತ್ ನೀರುಗಾಲುವೆ ಸಂಖ್ಯೆ: ಸಿ–100ರಲ್ಲಿ ನೀರು ಉಕ್ಕಿ ಹರಿದು ಪ್ರವಾಹ ಉಂಟಾಗಿರುತ್ತದೆ. ತದನಂತರ ಪ್ರವಾಹದ ನೀರನ್ನು ಹೊರಹಾಕಲಾಗಿದ್ದು, ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಪ್ರಕೃತಿ ವಿಕೋಪ ಮಾರ್ಗಸೂಚಿಗಳಂತೆ ಪರಿಹಾರ ವಿತರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ) | ಸದರಿ ಸಮಸ್ಯೆಯು ಸುಮಾರು 15 ವರ್ಷಗಳಿಂದಲೂ ನಿರಂತರವಾಗಿದ್ದು ಯಾವುದೇ ಪರಿಹಾರ ಕಾಣದಿರುವುದರಿಂದ KPTCL, BBMP, BDA ಹಾಗೂ BWSSB ಸಂಸ್ಥೆಗಳ ಸಮನ್ವಯತೆಯೊಂದಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸುವುದೇ; | ಹಾಲಿ ಇರುವ ಪೈಪ್ ಕಲ್ವರ್ಟ್ ಬ್ರಿಡ್ಜ್‌ನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣ ಮಾಡಲಾಗಿದ್ದು, 2018ರಲ್ಲಿ ಸದರಿ ಪೈಪ್ ಕಲ್ವರ್ಟ್ ಬ್ರಿಡ್ಜ್‌ನ್ನು ಸೆಗ್ಮೆಂಟಲ್ ಬ್ರಿಡ್ಜ್ ಆಗಿ ನಿರ್ಮಿಸಲು ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿ ಪ್ರಾರಂಭಿಸಲು ಪಾಯಕ್ಕೆ ಭೂಮಿ ಅಗೆಯುವ ಸಮಯದಲ್ಲಿ ಸದರಿ ಬ್ರಿಡ್ಜ್‌ನಲ್ಲಿ ಅಡ್ಡಲಾಗಿ ಎರಡು 220 KV Line ಗಳು ಇರುವ ಕಾರಣ KPTCL ಇಲಾಖೆಯವರು ಈ ಕೇಬಲ್‌ಗಳನ್ನು ಸ್ಥಳಾಂತರಿಸಿದ ನಂತರ ಕಾಮಗಾರಿಯನ್ನು ಮುಂದುವರೆಸ ಬಹುದಾಗಿರುತ್ತದೆ. ಇಲ್ಲಿಯವರೆಗೂ KPTCL ಇಲಾಖೆಯವರು ಈ ಕೇಬಲ್‌ಗಳನ್ನು ಸ್ಥಳಾಂತರಿಸದ ಕಾರಣ ಸದರಿ ಕಾಮಗಾರಿಯನ್ನು ಮುಂದುವರೆಸಲಾಗಿರುವುದಿಲ್ಲ. |
| ಇ) | ದೊಮ್ಮಲೂರು ಮೇಲ್ಸೇತುವೆಯ ಅವೈಜ್ಞಾನಿಕ ಕಾಮಗಾರಿಯಿಂದ ಸಮಸ್ಯೆ ಉದ್ಭವಿಸಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದೊಮ್ಮಲೂರು ಮೇಲ್ಸೇತುವೆಯ ನಿರ್ಮಾಣ ಸಮಯದಲ್ಲಿ ಹಾಲಿ ಇದ್ದ ಹಳೇ ವಿಮಾನ ನಿಲ್ದಾಣ ರಸ್ತೆ (ಹೆಚ್.ಎ.ಎಲ್ ವಿಮಾನ ನಿಲ್ದಾಣ ರಸ್ತೆ) ಮುಖಾಂತರ ಹಾದುಹೋಗುತ್ತಿದ್ದ ಮಳೆ ನೀರು ಕಾಲುವೆ ಮೇಲೆ ಹೊಸದಾಗಿ ಸೇತುವೆ ನಿರ್ಮಾಣ ಮಾಡಲು ಅನುಮತಿ ನೀಡದೇ ಇದ್ದ ಕಾರಣದಿಂದಾಗಿ, ಹಾಲಿ ಇದ್ದ ಪೈಪ್ ಕಲ್ವರ್ಟ್ ಸೇತುವೆಯನ್ನು ಅಗಲೀಕರಣ ಮಾಡಿ ಎರಡೂ ಬದಿಯಲ್ಲಿ ಮೇಲ್ಸೇತುವೆಗಾಗಿ |

. . .2/–

| | | |
|---|---|---|
| | | ಕಂಬಗಳ ನಿರ್ಮಾಣವನ್ನು ಮಾಡಿ ಮಳೆ ನೀರು ಕಾಲುವೆಗೆ ಯಾವುದೇ ತೊಂದರೆಯಾಗದಂತೆ ಪೈಪ್ ಕಲ್ವರ್ಟ್ ಅನ್ನು ಅಗಲೀಕರಣ ಮಾಡಲಾಗಿರುತ್ತದೆ.<br><br>ಆಗಿನ ಸಮಯದಲ್ಲಿ ಬೆಂಗಳೂರು ನಗರಕ್ಕೆ ಹೆಚ್.ಎ.ಎಲ್. ವಿಮಾನ ನಿಲ್ದಾಣವೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಕಾರ್ಯನಿರ್ವಹಿಸುತ್ತಿತ್ತು. ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಏಕೈಕ ಮಾರ್ಗ ಇದಾಗಿದ್ದರಿಂದ ರಸ್ತೆಯಲ್ಲಿ ಸಂಚಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿ ಕಾಮಗಾರಿಯನ್ನು ಕೈಗೊಂಡಿದ್ದ ಪಕ್ಷದಲ್ಲಿ ಸಾರ್ವಜನಿಕರಿಗೆ ಸಂಚಾರ ಮಾಡಲು ತೊಂದರೆ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ಈ ರಸ್ತೆಯನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು, ಹಾಲಿ ಇದ್ದ ಪೈಪ್ ಕಲ್ವರ್ಟ್‌ನ ವ್ಯಾಸವನ್ನೇ ಉಳಿಸಿಕೊಂಡು ರಸ್ತೆ ಅಗಲೀಕರಣ ಮಾತ್ರ ಪ್ರಾಧಿಕಾರದ ವತಿಯಿಂದ ಕೈಗೊಂಡು ಮೇಲ್ಸೇತುವೆಯನ್ನು ನಿರ್ಮಿಸಲಾಗಿರುತ್ತದೆ.<br><br>ಮುಂದುವರೆದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸದರಿ ಮೇಲ್ಸೇತುವೆಯನ್ನು 2007ನೇ ಸಾಲಿನಲ್ಲಿ ಬಿಬಿಎಂಪಿಗೆ ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿರುತ್ತದೆ. |

**ಸಂಖ್ಯೆ: ನಅಇ 737 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ